ಸಿವಿಲ್ ನ್ಯಾಯಾಧೀಶರು  ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ. ಸಿ. ನಂಃ 678/2021**

| | | | | | |
|---|---|---|---|---|---|
| **ಸಾಕ್ಷಿಯ ಹೆಸರು** | ಃ | ವೈ. ಸತ್ಯನಾರಾಯಣ | **ದಿನಾಂಕ** | ಃ | **26/03/2024** |
| **ತಂದೆಯ ಹೆಸರು** | ಃ | ಲೇಟ್ ಎಲ್ಲೇಗೌಡ | **ಸಿ ಡಬ್ಲ್ಯೂ** | ಃ | **01** |
| **ವಯಸ್ಸು** | ಃ | **48** ವರ್ಷ | **ಪಿ ಡಬ್ಲ್ಯೂ** | ಃ | **03** |
| **ಉದ್ಯೋಗ** | ಃ | ಪೊಲೀಸ್ ನಿರೀಕ್ಷಕರು,<br>ಶಿವಮೊಗ್ಗ ಗ್ರಾಮಾಂತರ ಠಾಣೆ | | | |
| **ವಿಳಾಸ** | ಃ | ಶಿವಮೊಗ್ಗ | | | |

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ನಾನು ಅಕ್ಟೋಬರ್ 2020 ರಿಂದ ಆಗಸ್ಟ್ 2022 ರವರೆಗೆ ಅರಕಲಗೂಡು ಪೊಲೀಸ್ ಠಾಣೆಯಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿಃ 20.01.2021 ರಂದು ರಾತ್ರಿ 8 ಗಂಟೆಗ ನಾನು ಕಚೇರಿಯಲ್ಲಿದ್ದಾಗ ಯಗಟಿ ಗ್ರಾಮದದಿನೇಶ ಎಂಬುವವರು ತನ್ನ ಪೆಟ್ಟಿಗೆ ಅಂಗಡಿಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವರು ಎದು ಮಾಹಿತಿ ಬಂದ ಆದಾರದ ಮೇಲೆ ನಾನು ಚಾಸಾ 2 ಮತ್ತು 3 ರವರೊಂದಿಗೆ ಡಿಇಲಾಖಾ ಜೀಪ್ ನಲ್ಲಿ ಹೊರಟು ಜೋಡಿಗುಬ್ಬಿ ಸರ್ಕಲ್ ನಲ್ಲಿ ನಿಲ್ಲಿಸಿ ಇಬ್ಬರು ಪಂಚರನ್ನು ಕೆರೆಕೋಡಿ ಎಂಬ ದೇವಾಲಯದ ಮುಂಭಾಗದಲ್ಲಿರುವ ಆರೋಪಿ ದಿನೇಶ ರವರ ಪೆಟ್ಟಿಗೆ ಅಂಗಡಿ ಮುಂಭಾಗ ಮದ್ಯವನ್ನು ಮಾರಾಟ ಮಾಡುತ್ತಿದ್ದು ಹಾಗೂ ನಮ್ಮನ್ನು ನೋಡಿ ಓಡಿಹೋಗಲು ಪ್ರಯತ್ನಿಸಿದಾಗ ನಾವು ಮತ್ತು ಪಂಚರನ್ನು ಆರೋಪಿಯನ್ನು ಸುತ್ತುವರೆದು ಹಿಡಿದುಕೊಂಡಿರುತ್ತೇವೆ. ಆತನ ವಶದಲ್ಲಿ90 ಎಂ ಎಲ್ ನ 24 ಒರಿಜಿನಲ್ ಛಾಯ್ಸ್ ವಿಸ್ಕಿ ಟೆಟ್ರಾ ಪ್ಯಾಕೇಟ್ ಗಳು ಹಾಗೂ 180 ಎಂ ಎಲ್ 3 ಓಲ್ಡ್ ಟವರಿನ್ ವಿಸ್ಕಿ ಟೆಟ್ರಾ ಪ್ಯಾಕೇಟ್ ಗಳು ಸಿಕ್ಕಿರುತ್ತವೆ. ಅವುಗಳನ್ನು ಮಾರಾಟ ಮಾಡಲು ಯಾವುದಾದರೂ ಪರವಾನಗಿ ಇದೆಯೇ ಎಂದು ಕೇಳಲಾಗಿ ಯಾವುದೇ ಪರವಾನಗಿ ಇಲ್ಲ ಎಂದು ತಿಚಳಿಸಿರುತ್ತಾರೆ.  ನಂತರ ಸ್ಥಳದಲ್ಲಿ ವರದಿಯಟುನ್ನು ತಯಾರಿಸಿ ಚಾಸಾ 2 ರವರ ಮುಖಾಂತರ ಠಾಣೆಗೆ ಕಳುಹಿಸಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಲು ಸೂಚಿಸಿರುತ್ತೇನೆ. ಪ್ರಥಮ ವರ್ತಮಾನ ವರದಿ ದಾಖಲಾದ ನಂತರ ನನ್ನ ಜೊತೆ ಕರೆದುಕೊಂಡು ಹೋದ ಚಾಸಾ4 ಮತ್ತು 5 ರವರಸಮಕ್ಷಮ ಕೃತ್ಯ ಸ್ಥಳದ ಮಹಜರ್  ಮಾಡಿ ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ಅಮಾನತುಪಡಿಸಿಕೊಂಡಿರುತ್ತೇನೆ. ಎರಡು ಮಾದರಿಗಳಿಂದ ಒಂದೊಂದು ಟೆಟ್ರಾ ಪ್ಯಾಕೇಟ್ ಗಳನ್ನು

ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯಲ್ಲಿ ಸುತ್ತಿ ಎ ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತೇನೆ . ಸದರಿ ಮಹಜರನ್ನು ರಾತ್ರಿ 9.30 ರಿಂದ 10.30 ರವರೆಗೆ ಮಾಡಿರುತ್ತೇನೆ. ನಂತರ ಠಾಣೆಗೆ ಬಂದು ಆರೋಪಿ ಮತ್ತು ಮಾಲನ್ನು ಮುಂದಿನ ಕ್ರಮವಾಗಿ ಪಿ ಎಸ್ ಐ ರವರಿಗೆ ಹಸ್ತಾಂತರಿಸಿರುತ್ತೇನೆ ಸದರಿ ದಿನದಂದು ಅಮಾನತುಪಡಿಸಿಕೊಂಡ ಮದ್ಯದ ಟೆಟ್ರಾ ಪ್ಯಾಕೇಟ್ ಗಳು ಈಗ ನ್ಯಾಯಾಲಯದಲ್ಲಿ ಇರುತ್ತದೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿಯು ಸದರಿ ದಿನದಂದು ಪರವಾನಗಿ ಇಲ್ಲದೇ ಮದ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯಾಗಿರುತ್ತಾನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರ ಮೇಲಿನ ತಮ್ಮ ಸಹಿ ಒಪ್ಪಿದ ಕಾರಣ ಸದರಿ ದೂರನ್ನು ನಿಪಿ 2 ಎಂದು , ಹಾಗೂ ಅದರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ 2 (ಎ)ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 1 ಕೃತ್ಯ ಸ್ಥಳ ಮಹಜರ್ ತೋರಿಸಲಾಗಿ ಅದರ ಮೇಲಿನ ತಮ್ಮ ಸಹಿ ಒಪ್ಪಿದ ಕಾರಣ ಸದರಿ ಸಹಿಯನ್ನು ನಿಪಿ 1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಸೀಲ್ ನ ನಕಲನ್ನು ನೋಡಿ ಗುರುತಿಸಿದ ಕಾರಣ ಸದರಿ ಮಾದರಿ ಸೀಲ್ ನ್ನು ನಿಪಿ 3 ಎಂದು , ಹಾಗೂ ಅದರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಮಹಜರ್ ಕಾಲದಲ್ಲಿ ಚಾಸಾ 2 ರಿಂದ 4 ರವರು ಹಾಜರಿದ್ದರು.

## ಪಾಟೀ ಸವಾಲು ಶ್ರೀ. ಜಿ ಜಿ ಆರ್ ವಕೀಲರಿಂದ ಆರೋಪಿಯ ಪರಃ

ನನಗೆ ಮಾಹಿತಿ ನೀಡಿದ ಬಾತ್ಮಿದಾರರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ಅವರ ಹೇಳಿಕೆಯನ್ನು ಪಡೆದಿರುವುದಿಲ್ಲ. ನಾವು ಹೋದ ಪೆಟ್ಟಿಗೆ ಅಂಗಡಿಗೆ ಹೆಸರು ಇರಲಿಲ್ಲ. ಸದರಿ ಅಂಗಡಿಯ ವಿಸ್ತೀರ್ಣ ಎಂದರೆ ಉದ್ದ – ಅಗಲ ಎಷ್ಟು ಎಂದು ದೂರಿನಲ್ಲಿ ನಮೂದು ಮಾಡಿರುವುದಿಲ್ಲ. ಪೆಟ್ಟಿಗೆ ಅಂಗಡಿಯಲ್ಲಿ ಯಾವ ಯಾವ ವಸ್ತುಗಳನ್ನು ಆರೋಪಿ ಮಾರಾಟ ಮಾಡುತ್ತಿದ್ದ ಎಂದು ದೂರು ಹಾಗೂ ಮಹಜರ್ ನಲ್ಲಿ ಬರೆದಿರುವುದಿಲ್ಲ. ಮಹಜರ್ ನಲ್ಲಿ ಟೆಟ್ರಾ ಪ್ಯಾಕೇಟ್ ಗಳ ಬ್ಯಾಚ್ ನಂಬರುಗಳನ್ನು ನಮೂದು ಮಾಡಿರುತ್ತೇನೆ, ದೂರಿನಲ್ಲಿ ಆ ರೀತಿ ನಮೂದು ಮಾಡಿರುವುದಿಲ್ಲ. ಸದರಿ ಮದ್ಯದ ಪ್ಯಾಕೇಟ್ ಗಳಲ್ಲಿ ಯಾವ ಬಾರ್ ನ ಮಾಲೀಕರಿಂದ ಖರೀದಿಸಲಾಗಿತ್ತು ಎಂದು ನಾನು ತನಿಖೆ ಮಾಡಿರುವುದಿಲ್ಲ. ನಾನು ಅಮಾನತುಪಡಿಸಿಕೊಂಡ ಎಲ್ಲಾ ಟೆಟ್ರಾ ಪ್ಯಾಕೇಟ್ ಗಳಲ್ಲಿ ಮದ್ಯ ತುಂಬಿತ್ತು. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಮದ್ಯದ ಟೆಟ್ರಾ ಪ್ಯಾಕೇಟ್ ಗಳು ಖಾಲಿ ಇರುತ್ತವೆ ಎಂದರೆ ಸಾಕ್ಷಿಯು ಸದರಿ ಪ್ಯಾಕೇಟ್ ಗಳು ರಾಸಾಯನಿಕ ಪರೀಕ್ಷಾ ಎಫ್ ಎಸ್ ಎಲ್ ಗೆ ಹೋಗಿ ಬಂದಿರುತ್ತವೆ ಎಂದು ನುಡಿಯುತ್ತಾರೆ. ಎಂ ಓ 1 ಮತ್ತು 2 ಟೆಟ್ರಾ ಪ್ಯಾಕೇಟ್ ಗಳು ಈ ಪ್ರಕರಣಕ್ಕೆ ಸಂಬಂದಿಸಿದ್ದಲ್ಲ ಎಂದರೆ ಸರಿಯಲ್ಲ. ನಾನು ಯಗಟಿ

ಗ್ರಾಮಕ್ಕೆ ಹೋಗಿರುವುದಿಲ್ಲ , ಯಾವುದೇ ಮದ್ಯದ ಪ್ಯಾಕೇಟ್ ಗಳನ್ನು ವಶಕ್ಕೆ ಪಡೆದುಕೊಂಡಿರುವುದಿಲ್ಲ, ನಾನು ಅಬಕಾರಿ ಅಂಕಿಅಂಶಗಳಿಗಾಗಿ ಸುಳ್ಳು ದೂರನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿದ್ದರೆ ಸದರಿ ಅಂಗಡಿಯ ವಿಸ್ತೀರ್ಣವನ್ನು ಮಹಜರ್ ನಲ್ಲಿ ನಮೂದು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

**ಜೆಎಂಎಫ್‌ಸಿ, ಅರಕಲಗೂಡು.**